# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ವಿರಾಜಪೇಟೆ

## ಸಿ.ಸಿ.ನಂ. 952/2023

**ಪಿರ್ಯಾದಿಃ** ಶ್ರೀ. ಮಹೇಶ್ ಪಿ ಎಸ್ ತಂದೆಃ ಪಿ ಕೆ ಸುಂದರ,
ಪ್ರಾಯ 38 ವರ್ಷ
ವಾಸಃ ಹೆಗ್ಗಳ ಗ್ರಾಮ ಮತ್ತು ಅಂಚೆ,
ವಿರಾಜಪೇಟೆ ತಾಲ್ಲೂಕು, ಕೊಡುಗು ಜಿಲ್ಲೆ.

**ವಿರುದ್ಧ**

**ಆರೋಪಿಃ** ಶ್ರೀಮತಿ. ಆಶಾ ಟಿ ಬಿ, ತಂದೆಃ ಭಾಸ್ಕರ ಟಿ ಎಂ,
ಪ್ರಾಯ 34 ವರ್ಷ
ವಾಸಃ ಮೈಸೂರಮ್ಮ ಕಾಲೋನಿ,
ಮುತ್ತಪ್ಪ ದೇವಸ್ಥಾನದ ಹತ್ತಿರ,
ಅರ್ವತೋಕ್ಲು, ಗೋಣಿಕೊಪ್ಪಲ್,
ಪೊನ್ನಂಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

**::ಆಪಾದನೆಯ ಸಾರಾಂಶ::**

ಏನೆಂದರೆ, ಆರೋಪಿಯಾದ ನೀವು ಹಾಗೂ ಪಿರ್ಯಾದಿಯವರು ಹಲವಾರು ವರ್ಷಗಳಿಂದ ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ದೂರುದಾರರ ಹತ್ತಿರ 2023 ನೇ ಇಸವಿಯ ಮೇ ತಿಂಗಳ ಕೊನೆಯ ವಾರದಲ್ಲಿ ಹಣದ ಅವಶ್ಯಕತೆ ಇದೆ ಎಂದು, ಆರೋಪಿಯಾದ ನೀವು ದೂರುದಾರರಿಂದ ರೂ. 30,000/- ಹಣವನ್ನು ಕೈಸಾಲವಾಗಿ ಪಡೆದುಕೊಂಡಿರುತ್ತೀರಿ. ಸದರಿ ಹಣವನ್ನು ಮರು ಪಾವತಿ ಮಾಡಲು ನೀವು ದಿನಾಂಕ 18-07-2023 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗೋಣಿಕೊಪ್ಪಲು ಶಾಖೆಗೆ ಸೇರಿದ ಚೆಕ್ ಸಂಖ್ಯೆ 326878, ರೂ.30,000/- ಚೆಕ್ಕನ್ನು ಪಿರ್ಯಾದಿಗೆ ನೀಡಿರುತ್ತೀರಿ. ಆರೋಪಿಯಾದ ನೀವು ದೂರುದಾರರಿಗೆ ನಿಗದಿತ ಸಮಯದಲ್ಲಿ ಹಣವನ್ನು ಪಾವತಿಸದೇ ಇದ್ದ ಕಾರಣ ಸದರಿಯವರು ರೂ.30,000/- ನೀಡಿರುವ ಚೆಕ್ ಸಂಖ್ಯೆ 326878 ನಗದೀಕರಿಸುವ ಸಲುವಾಗಿ SBI BANK, ವಿರಾಜಪೇಟೆ ಶಾಖೆಯ ಮೂಲಕ ಸಲ್ಲಿಸಿದಾಗ, ಸದರಿ ಚೆಕ್ " **Funds Insufficient**" ಎಂಬ ಕಾರಣ ನಮೂದಿಸಿ ದಿನಾಂಕಃ 06-10-2023 ರಂದು ಬ್ಯಾಂಕ್ ಹಿಂಬರಹದೊಂದಿಗೆ ಅಮಾನ್ಯಗೊಂಡ ಚೆಕ್ ಹಿಂದಿರುಗಿಸಿರುತ್ತಾರೆ. ಚೆಕ್ ನಗದಾಗದೇ ಮರಳಿ ಬಂದ ನಂತರ ಪಿರ್ಯಾದಿದಾರರು ನಿಮಗೆ ನೋಂದಾಯಿತ ಅಂಚೆಯ ಮೂಲಕ ತಮ್ಮ ವಕೀಲರಿಂದ ದಿನಾಂಕಃ 17-10-2023 ರಂದು

ನೋಟೀಸ್ ಕಳುಹಿಸಿ ಚೆಕ್‌ನ ಹಣವನ್ನು ತಮಗೆ ಪಾವತಿಸಬೇಕೆಂದು ತಗಾದೆ ಮಾಡಿರುತ್ತಾರೆ. ಸದರಿ ನೋಟಿಸ್ ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್‌ನ ಮೊತ್ತವನ್ನು ಪಿರ್ಯಾದಿ ಬ್ಯಾಂಕಿಗೆ ಪಾವತಿಸಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ 1881 ರ ವಿಧಿ 138 ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ನಿಮ್ಮ ವಿರುದ್ಧ ಆಪಾದನೆ ಇದೆ.

ಪ್ರಶ್ನೆ: 1. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ: 2. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಮೇಲಿನ ಆಪಾದನೆಯ ಸಾರಾಂಶವನ್ನು ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ.)

ಸಹಿ/-

**(ಪ್ರದೀಪ ಪೋತದಾರ)**

**ದಿನಾಂಕಃ05.11.2025** **ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,**

**ವಿರಾಜಪೇಟೆ.**